


**ವಸುಧೇಂದ್ರ**

ನಲವತ್ತು ಸಮೀಪಿಸುತ್ತಿರುವ, ತಲೆಯಲ್ಲಿ ಆಗಲೇ ಒಂದಿಷ್ಟು ಬೆಳ್ಳಿಕೂದಲು ಮೂಡಿರುವ, ಏಕಾಂಗಿ ಬದುಕು ಸಾಗಿಸುವ, ಅಪ್ಪಟ 'ಗೇ' ಮನುಷ್ಯ ಮೋಹನಸ್ವಾಮಿಗೆ ಪರಿಸ್ಥಿತಿಯ ವ್ಯಂಗ್ಯಕ್ಕೆ ನಗಬೇಕೋ, ಅಳಬೇಕೋ, ಮುಜುಗರ ಪಟ್ಟುಕೊಳ್ಳಬೇಕೋ ತಿಳಿಯಲಿಲ್ಲ.

ಆಕೆಯ ಹೆಸರು ಸಾರಾ; ಸಾರಾ ಉನ್ನಿಕೃಷ್ಣನ್. ಆಕರ್ಷಕ ಮೈಕಟ್ಟಿನ ಮಲಯಾಳಿ ಹೆಂಗಸು. ಮೋಹನಸ್ವಾಮಿಯ ಅಪಾರ್ಟ್‌ಮೆಂಟಿನಲ್ಲಿ ವಾಸ. ಒಬ್ಬ ಪುಟ್ಟ ಮಗನಿದ್ದಾನೆ. ಇದ್ದಕ್ಕಿದ್ದಂತೆಯೇ ಆಕೆಗೆ ಮೋಹನಸ್ವಾಮಿಯ ಮೇಲೆ ಮೋಹ ಮೂಡಿ ಬಿಟ್ಟಿತು. ಮೇಲಿಂದ ಮೇಲೆ ಪ್ರೇಮದ, ಕಾಮದ ಸಂದೇಶಗಳನ್ನು ಅವನ ಮೊಬೈಲ್‌ಗೆ ಕಳುಹಿಸಲಾರಂಭಿಸಿದಳು. ಮೊದಮೊದಲಿಗೆ ಮೋಹನಸ್ವಾಮಿ ಎಲ್ಲೋ ಏನೋ ಎಡವಟ್ಟಾಗಿದೆ ಎಂದು ಅರ್ಥ ಮಾಡಿಕೊಂಡು ಅಲಕ್ಷ್ಯಿಸಿದ. ಆದರೆ ನೇರವಾಗಿ ಅದು ತನ್ನನ್ನೇ ಕುರಿತಾದದ್ದು ಎಂದು ಗೊತ್ತಾಗಲು ಸಮಯ ಹಿಡಿಯಲಿಲ್ಲ. "ಬೇಗನೆ ಹೇರ್ ಕಟಿಂಗ್‌ಗೆ ಹೋಗು... ತಲೆಯ ತುಂಬಾ ಕೂದಲು ಅಡ್ಡಾದಿಡ್ಡಿಯಾಗಿ ಬೆಳೆದಿವೆ", "ಮೂರು ದಿನದಿಂದ ಒಂದೇ ಪ್ಯಾಂಟ್ ಹಾಕುತ್ತಿರುವೆ. ದಯವಿಟ್ಟು ಬದಲಾಯಿಸು", "ಅಪಾರ್ಟ್‌ಮೆಂಟಿನಲ್ಲಿ ಓಡಾಡುವವರಿಗೆಲ್ಲಾ ಕಾಣುವಂತೆ ನಿನ್ನ ಬಣ್ಣಬಣ್ಣದ ಕಾಚಾಗಳನ್ನು ಒಣಗಿ ಹಾಕಿರುವೆಯಲ್ಲಾ? ಸ್ವಲ್ಪ ಒಳಗಡೆ ಹರವು" ಇತ್ಯಾದಿಗಳಿಂದ ಪ್ರಾರಂಭವಾಯ್ತು.

ಆರಂಭದ ತಲೆಹರಟೆಯ ಸಂದೇಶಗಳು ಅಪ್ಪಟ ಕಾಮದ ಸಂದೇಶಗಳಾಗಿ ಪರಿವರ್ತನೆಗೊಳ್ಳಲು ಹೆಚ್ಚಿನ ಸಮಯ ಬೇಕಾಗಲಿಲ್ಲ. "ನಿನ್ನ ಕಾಲಿನ ಮೀನಖಂಡಗಳು ಅದೆಷ್ಟು ಬಲಿಷ್ಠವಾಗಿವೆ! ಒಮ್ಮೆ ನವಿರಾಗಿ ಸವರಲಾ?", "ಉನ್ನಿ ಮನೆಯಲ್ಲಿಲ್ಲ. ಮೂರು ದಿನ ಕಚೇರಿಯ ಕೆಲಸದ ಮೇಲೆ ಪ್ರವಾಸಕ್ಕೆ ಹೋಗಿದ್ದಾನೆ. ರಾತ್ರಿ ಬರುವೆಯಾ?", "ಒಳ್ಳೆಯ ಟೆಲಿಸ್ಕೋಪ್ ಕೊಂಡಿದ್ದೇನೆ. ನಿನ್ನ ದೇಹದ ಇಂಚಿಂಚನ್ನೂ ನನ್ನ ಕಣ್ಗಳು ಸವಿಯುತ್ತಿವೆ" – ಇತ್ಯಾದಿಗಳು ಪುಂಖಾನುಪುಂಖವಾಗಿ ಬರಲಾರಂಭಿಸಿದವು.

ಯಾವ ಸಂದೇಶಕ್ಕೂ ಮೋಹನಸ್ವಾಮಿ ಪ್ರತಿಕ್ರಿಯಿಸಲಿಲ್ಲ. ಹೆಣ್ಣಿನ ಮೇಲೆ ಯಾವತ್ತೂ ಅವನಿಗೆ ಆಕರ್ಷಣೆ ಮೂಡಿಲ್ಲ ಎನ್ನುವುದು ಒಂದು ಕಾರಣವಾದರೆ,